ಬ) ಬಂದಿದೆ

ಈ) ತುಂಗಾ ಮೇಲ್ಪಂಡೆ ಯೋಜನೆಗೆ ಬೇಕಾಗುವ 449.55 ಹೆಕ್ಟೇರ್ ಅರಣ್ಯ ಪ್ರದೇಶ ಬಿಡುಗಡೆ ಮಾಡುವ ಬಗ್ಗೆ ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ರೀತ್ಯಾ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ದಿ: 16-12-96 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತದೆ. ಕೇಂದ್ರ ಸರ್ಕಾರವು ತನ್ನ ದಿನಾಂಕ 25-4-97ರ ಪತ್ರದಲ್ಲಿ ಕೇಳಿರುವ ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸಲಾಗಿತ್ತು. ಪುನಃ ಕೇಂದ್ರ ಸರ್ಕಾರವು ದಿ:5-5-98ರ ಪತ್ರದಲ್ಲಿ ಕೆಲವೊಂದು ಹೆಚ್ಚಿನ ಮಾಹಿತಿಯನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಹೆಚ್ಚಿನ ಮಾಹಿತಿಯನ್ನು ಕ್ರೋಢೀಕರಿಸಲಾಗುತ್ತಿದೆ ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.

ಉ) ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಪ್ರಕಾರ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಅರಣ್ಯ ಭೂಮಿ ಬಿಡುಗಡೆ ಮಾಡಲು ಆಸ್ಪದವಿಲ್ಲ. ಕೇಂದ್ರ ಸರ್ಕಾರ ಕೋರಿರುವ ಹೆಚ್ಚುವರಿ ಮಾಹಿತಿಗಳನ್ನು ಕಳುಹಿಸಿ ಆ ನಂತರ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಂಡು ಹಸ್ತಾಂತರಿಸಲಾಗವುದು.

ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ

2865:(3888)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಅರಣ್ಯ ಪ್ರದೇಶವನ್ನು ಕಾಯಲು ಎಷ್ಟು ಗಾರ್ಡ್‌ಗಳ ಅವಶ್ಯಕತೆ ಇದೆ? (ಜಿಲ್ಲಾವರು ವಿವರ ನೀಡುವುದು)

ಇ) ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವ ಗಾರ್ಡ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಈ) ಇನ್ನು ಅವಶ್ಯಕವಿರುವ ಗಾರ್ಡ್‌ಗಳ ಹುದ್ದೆಗಳನ್ನು ಎಷ್ಟು ಅವಧಿಯೊಳಗೆ ಭರ್ತಿ ಮಾಡಲಾಗುವುದು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರದೇಶ 38,28,428 ಹೆಕ್ಟೇರುಗಳು. ಜಿಲ್ಲಾವಾರು ಅರಣ್ಯ ಪ್ರದೇಶದ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಜಿಲ್ಲೆ	ಅರಣ್ಯಪ್ರದೇಶ (ಹೆಕ್ಟೇರುಗಳಲ್ಲಿ)
1)	ಬೆಂಗಳೂರು(ಗ್ರಾಮಾಂತರ)	109438
2)	ಬೆಂಗಳೂರು(ನಗರ)	7364
3)	ಬೆಳಗಾವಿ	224557
4)	ಬಳ್ಳಾರಿ	174353
5)	ಬೀದರ್	48231
6)	ಬಿಜಾಪುರ	82758
7)	ಚಿಕ್ಕಮಗಳೂರು	217908
8)	ಚಿತ್ರದುರ್ಗ	156229
9)	ದಕ್ಷಿಣ ಕನ್ನಡ	518130
10)	ಧಾರವಾಡ	143673
11)	ಗುಲ್ಬರ್ಗಾ	113785
12)	ಹಾಸನ	54107
13)	ಕೊಡಗು	125952
14)	ಕೋಲಾರ	103941
15)	ಮಂಡ್ಯ	27279
16)	ಮೈಸೂರು	412962
17)	ರಾಯಚೂರು	65075

18)	ಶಿವಮೊಗ್ಗ	327016
19)	ತುಮಕೂರು	86517
20)	ಉತ್ತರ ಕನ್ನಡ	829153
	ಒಟ್ಟು	3828428

ಆ) ಈ ಅರಣ್ಯ ಪ್ರದೇಶವನ್ನು ಕಾಯಲು ಅವಶ್ಯಕತೆ ಇರುವ ಗಾರ್ಡ್‌ಗಳ ಸಂಖ್ಯೆ:4139. ಈ ಬಗ್ಗೆ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಜಿಲ್ಲೆ	ಮಂಜೂರಾದ ಹುದ್ದೆ
1.	ಬೆಂಗಳೂರು(ಗ್ರಾಮಾಂತರ)	166
2.	ಬೆಂಗಳೂರು(ನಗರ)	174
3.	ಬೆಳಗಾವಿ	190
4.	ಬಳ್ಳಾರಿ	65
5.	ಬೀದರ್	91
6.	ಬಿಜಾಪುರ	191
7.	ಚಿಕ್ಕಮಗಳೂರು	384
8.	ಚಿತ್ರದುರ್ಗ	66
9.	ದಕ್ಷಿಣ ಕನ್ನಡ	217
10.	ಧಾರವಾಡ	200
11.	ಗುಲ್ಬರ್ಗಾ	110
12.	ಕೊಡಗು	218
13.	ಮಂಡ್ಯ	259
14.	ಮೈಸೂರು	251

15.	ಹಾಸನ	134
16.	ರಾಯಚೂರು	69
17.	ಶಿವಮೊಗ್ಗ	382
18.	ತುಮಕೂರು	130
19.	ಕೋಲಾರ	175
20.	ಉತ್ತರ ಕನ್ನಡ	667
	ಒಟ್ಟು	4139

ಇ) ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವ ಗಾರ್ಡ್‌ಗಳ ಸಂಖ್ಯೆ 3191. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಜಿಲ್ಲೆ	
1)	ಬೆಂಗಳೂರು (ಗ್ರಾಮಾಂತರ)	138
2)	ಬೆಂಗಳೂರು (ನಗರ)	135
3)	ಬೆಳಗಾವಿ	83
4)	ಬಳ್ಳಾರಿ	60
5)	ಬೀದರ್	72
6)	ಬಿಜಾಪುರ	184
7)	ಚಿಕ್ಕಮಗಳೂರು	276
8)	ಚಿತ್ರದುರ್ಗ	61
9)	ದಕ್ಷಿಣ ಕನ್ನಡ	177
10)	ಧಾರವಾಡ	115
11)	ಗುಲ್ಬರ್ಗಾ	95

12)	ಹಾಸನ	121
13)	ಕೊಡಗು	180
14)	ಕೋಲಾರ	148
15)	ಮಂಡ್ಯ	237
16)	ಮೈಸೂರು	170
17)	ರಾಯಚೂರು	49
18)	ಶಿವಮೊಗ್ಗ	249
19)	ತುಮಕೂರು	112
20)	ಉತ್ತರ ಕನ್ನಡ	529
	ಒಟ್ಟು	3191

ಈ) ಅರಣ್ಯ ಇಲಾಖೆಯಲ್ಲಿ 948 ಗಾರ್ಡ್‌ಗಳ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲು ತೀರ್ಮಾನಿಸಲಾಗಿದ್ದು, ಪ್ರಸ್ತಾವನೆಯನ್ನು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿದೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯು ಕೈಗೊಂಡ ಕಾರ್ಯಕ್ರಮಗಳು.

2866:(3862)

ಶ್ರೀ ಎನ್.ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ 98-99ನೇ ಸಾಲಿನಲ್ಲಿ ಅರಣ್ಯ ಇಲಾಖೆಯು ಕೈಗೊಂಡ ಯೋಜನೆಗಳು ಕಾರ್ಯಕ್ರಮಗಳು ಯಾವುವು?

ಆ) 1998-99 ರಲ್ಲಿ ಇಲ್ಲಿಯವರೆಗೆ ವಿವಿಧ ಯೋಜನೆಗಳಿಗೆ ಮಾಡಿರುವ ವೆಚ್ಚವೆಷ್ಟು ಹಾಗೂ ಈ ಸಾಲಿನಲ್ಲಿ ಈ ಯೋಜನೆಗಳಿಗೆ ನಿಗದಿಪಡಿಸಿರುವ ಹಣವೆಷ್ಟು?